ಹಂಬಲದಲ್ಲಿ ಎಡತಾಕುತ್ತಿದ್ದ ನೂರಾರು ಜನರಲ್ಲಿ ಮಹಾಚಲಯ್ಯನೂ ಒಬ್ಬ.

ಇನ್ನು ಕೆಲವರಿಗೆ ಜಾತ್ರೆಯೆಂದರೆ ದೇವರು ಪಲ್ಲಕ್ಕಿಯಲ್ಲಿ ಗರ್ಭಗುಡಿಯಿಂದ ಹೊರಗೆ ಬಂದು, ರಥವನ್ನು ಏರಿ ಒಂದು ಸುತ್ತು ಮೈದಾನದಲ್ಲಿ ತಿರುಗಾಡಿ ಜನರಿಗೆಲ್ಲ ದರ್ಶನ ನೀಡಿ ಗರ್ಭಗುಡಿಗೆ ಮರಳಿ ಪವಡಿಸುವವರೆಗಿನ ಚಟುವಟಿಕೆಗಳು. ಅದು ನೆರವೇರಿ ಆಗಿತ್ತು. ರಥವನ್ನು ಎಳೆದು ದೇವರನ್ನು ಇಳಿಸಿ ಒಳಗೆ ಕೊಂಡೊಯ್ದು, ಜೋಗುಳ ಹಾಡಿ ಮಲಗಿಸಿ, ಗರ್ಭಗುಡಿಯ ಬಾಗಿಲು ಹಾಕಿ ಆಗಿತ್ತು. ಅದರಲ್ಲಷ್ಟೆ ಆಸಕ್ತಿ ಇದ್ದವರು ಮನೆ ಸೇರಿಯೂ ಆಗಿತ್ತು.

ಮಹಾಚಲಯ್ಯ ಒಮ್ಮೆ ಜಾತ್ರೆ ತಿರುಗಾಟ ಮುಗಿಸಿ ಹಿಂದಿರುಗಿದರೆ ತಾವು ಕೂಡ ಮನೆ ಸೇರಿ ಮೈಚಾಚಿ ಬಿದ್ದುಕೊಳ್ಳಬಹುದಿತ್ತು ಎಂದು ಸುಸ್ತಾಗಿದ್ದ ಅವನ ಹೆಂಡತಿ ಶಾಂತಮ್ಮ ಮತ್ತು ಮಕ್ಕಳು ಕಾಯುತ್ತಿದ್ದರು. ಜಾತ್ರೆಯ ಊಟ ಮಾಡಿದ್ದುದರಿಂದ ಹಸಿವು ಅಷ್ಟಾಗಿ ಕಾಡುತ್ತಿರಲಿಲ್ಲ. ಆದರೆ ಸುಸ್ತಾಗಿತ್ತು. ಮಕ್ಕಳು ತಮಗಾಗುತ್ತಿದ್ದ ವಾತಾವರಣದ ಹಿಂಸೆಯನ್ನು ತಾಳಲಾರದೆ ಅಳುತ್ತಾ ತಾಯಿಗೂ ಹಿಂಸೆಯನ್ನು ಹಂಚುತ್ತಿದ್ದವು.

ಅಷ್ಟರಲ್ಲಿ ಒಂದು ಕಡೆ ಮೈದಾನದ ಹೊರ ಸುತ್ತಿನಲ್ಲಿ ಬೇಲಿ ಹಾರುತ್ತಿದ್ದ ಮಹಾಚಲಯ್ಯನನ್ನು ಪೊಲೀಸರು ಮತ್ತು ಕೊರೊನಾ ಯೋಧರು ಹಿಡಿದು ಕಬ್ಬಿಣದ ವಾಹನದಲ್ಲಿ ತುಂಬಿಸಿಕೊಂಡು ಒಯ್ದರು. ಮನೆಯವರು ತನಗಾಗಿ ಕಾಯುತ್ತಿದ್ದಾರೆ, ಒಮ್ಮೆ ಅವರನ್ನು ಕಂಡು ತಿಳಿಸಿ ಬರುತ್ತೇನೆ ಎಂದು ಮಹಾಚಲಯ್ಯ ಪರಿಪರಿಯಾಗಿ ವಿನಂತಿಸಿಕೊಂಡರೂ ಪೊಲೀಸರು ಅವನನ್ನು ಹಿಡಿದುಕೊಂಡು ಹೋಗಿ ಕೊರೊನಾ ಶಿಬಿರಕ್ಕೆ ಹಾಕಿದರು. ಎರಡು ವಾರಗಳ ಕಾಲ ಸುದ್ದಿಯಿಲ್ಲದೆ, ಕೊನೆಗೆ ಮನೆಗೆ ತಲುಪಿದ್ದು ಅವನ ಮರಣವಾರ್ತೆಯಷ್ಟೆ.

***

ಮಹಾಚಲಯ್ಯನ ದೇಹವನ್ನು ಜಾತಿಯ ಕ್ರಮದಂತೆ ಸ್ನಾನ ಅಲಂಕಾರ ಇತ್ಯಾದಿ ಸಕಲ ಗೌರವಸಹಿತ ಅಂತ್ಯಕ್ರಿಯೆ ಮಾಡಲು ಸರಕಾರದ ನಿಯಮಾನುಸಾರ ಅವಕಾಶ ಇರಲಿಲ್ಲ. ದೇಹ ವನ್ನು ಮನೆಯವರಿಗೆ ಕೊಡಲಿಲ್ಲ ಮಾತ್ರವಲ್ಲ, ಯಾರಿಗೂ ಮೃತನ ಮುಖವನ್ನು ದೂರದಿಂದಲೂ

